

# ಸೋನಂಗೆ ಧನುಷ್ ವೋಟು

■ ವಿಶಾಖ ಎನ್.

'ಸೋನಂ ಕಪೂರ್ ಅಥವಾ ಸಾರಾ ಅಲಿ ಖಾನ್... ಈ ಇಬ್ಬರಲ್ಲಿ ನಿಮ್ಮ ಆಯ್ಕೆ ಯಾವುದು' – ಇಂತಹುದೊಂದು ಪ್ರಶ್ನೆ ಧುತ್ತನೆ ನಟ ಧನುಷ್‌ಗೆ ಎದುರಾಯಿತು. ಕ್ಷಣವೂ ಯೋಚಿಸದೆ, 'ಸೋನಂ ಕಪೂರ್' ಎಂದರು ಧನುಷ್.

'ಅತ್‌ರಂಗಿ ರೇ' ಹಿಂದಿ ಚಿತ್ರದಲ್ಲಿ ಧನುಷ್ ಅಭಿನಯಿಸಿದ್ದು, ಅದರ ಪ್ರಚಾರ ಕಾರ್ಯದ ಭಾಗವಾಗಿ ಟಿ.ವಿ. ರಿಯಾಲಿಟಿ ಶೋದಲ್ಲಿ ಕರಣ್ ಜೋಹರ್ ಕೇಳಿದ ಪ್ರಶ್ನೆಗೆ ಎದುರಾದರು. ರ್‍ಯಾಪಿಡ್ ಫೈರ್ ರೌಂಡ್ ಪ್ರಶ್ನೆಯಲ್ಲಿ ಸೋನಂ ಕಪೂರ್ ಅವರನ್ನೇ ಆಯ್ಕೆ ಮಾಡಲು ಕಾರಣವಿತ್ತು.

ಧನುಷ್ ಮೊದಲು ನಟಿಸಿದ ಹಿಂದಿ ಚಿತ್ರ 'ರಾಂಝುಣಾ'. 2013ರಲ್ಲಿ ತೆರೆಕಂಡ ಆ ಸಿನಿಮಾ ಆ ವರ್ಷದ ಹಿಟ್ ಚಿತ್ರಗಳ ಪಟ್ಟಿ ಸೇರಿತ್ತು. ದಕ್ಷಿಣ ಭಾರತದ ನಟನೊಬ್ಬನಿಗೆ ಬಾಲಿವುಡ್‌ನಲ್ಲಿ ಸಂದ ಅಚ್ಚರಿಯ ಯಶಸ್ಸು ಅದು ಎಂದೇ ಸಿನಿಮಾ ಪಂಡಿತರು ವಿಶ್ಲೇಷಿಸಿದರು. ಅದರಲ್ಲಿನ ಧನುಷ್ ಅಭಿನಯಕ್ಕೂ ಶಹಬ್ಬಾಸ್‌ಗಿರಿ ಸಂದಿತ್ತು.

ಆನಂದ್ ಎಲ್. ರೈ ನಿರ್ದೇಶನದ 'ರಾಂಝುಣಾ'ದಲ್ಲಿ ನಟಿಸಲು ಒಪ್ಪಿದ್ದಾಗ ಧನುಷ್‌ಗೆ ಆತಂಕವಿತ್ತಂತೆ. ಆಗ ಸೋನಂ ಕಪೂರ್ ಸಹಕರಿಸಿ, ಧೈರ್ಯ ತುಂಬಿದ ರೀತಿಗೆ ದಕ್ಷಿಣ ಭಾರತದ ನಟ ಫಿದಾ ಆದರಂತೆ.

'ರಾಂಝುಣಾ ನಾನು ನಟಿಸಿದ ಮೊದಲ ಹಿಂದಿ ಚಿತ್ರ. ಸೋನಂ ನಾನು ಕಂಡ ಉತ್ತಮ ನಟಿ. ಅವರು ನನಗೆ ಸಹಕರಿಸಿ, ಧೈರ್ಯ ತುಂಬಿದ ಕ್ಷಣಗಳು ಈಗಲೂ ನೆನಪಿನಲ್ಲಿವೆ. ಈ ಕಾರಣಕ್ಕೆ ಅವರೇ ಸಾರಾ ಅಲಿ ಖಾನ್‌ಗಿಂತ ನನ್ನ ಪಾಲಿಗೆ ಮುಖ್ಯ' ಎಂದರು ಧನುಷ್.

ಆನಂದ್ ಎಲ್. ರೈ ಅವರೇ 'ಅತ್‌ರಂಗಿ ರೇ' ಚಿತ್ರವನ್ನು ನಿರ್ದೇಶನ ಮಾಡಿದ್ದು, ಡಿಸ್ನಿ ಹಾಟ್‌ಸ್ಟಾರ್‌ನಲ್ಲಿ ಅದು ಬಿಡುಗಡೆಯಾಗಿದೆ. ಕೋವಿಡ್ ಕಾರಣದಿಂದಾಗಿ ಚಿತ್ರಮಂದಿರಕ್ಕೆ ಹೆಚ್ಚು ಜನ ಬರುತ್ತಿಲ್ಲವೆಂದು ಅವರು ಒಟಿಟಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ.

'ಅತ್‌ರಂಗಿ ರೇ' ಸಿನಿಮಾದಲ್ಲಿ ನಾಯಕಿಯ ಪಾತ್ರ ಸಾಕಷ್ಟು ಶ್ರಮ, ಪ್ರತಿಭೆಯನ್ನು ಬೇಡುತ್ತದೆ. ಸಾರಾ ಅವರನ್ನು ಆ ಪಾತ್ರಕ್ಕೆ ಆಯ್ಕೆ ಮಾಡಿದ್ದಾಗಿ ಆನಂದ್ ರೈ ಹೇಳಿದಾಗ, ಧನುಷ್ ಅವರಿಗೆ ಅನುಮಾನವಿತ್ತು. ಎರಡು ಮೂರು ಚಿತ್ರಗಳಲ್ಲಿ ನಟಿಸಿದ ನಾಯಕಿ ಇಷ್ಟು ತೂಕದ ಪಾತ್ರ ನಿರ್ವಹಿಸಬಲ್ಲರೆ ಎನ್ನುವುದು ಅವರಿಗಿದ್ದ ಪ್ರಶ್ನೆ. ಈಗ ಅದಕ್ಕೆ ಉತ್ತರ ಸಿಕ್ಕಿದೆ. ಯಾವುದಕ್ಕೂ ಸಿನಿಮಾ ನೋಡಿ ಎಂದು ಧನುಷ್ ಆಹ್ವಾನವೀಯುತ್ತಾರೆ. ■



# ಪಲ್ಲವಿಯ ಮಾತಿನೇಟು

ನಟ ನಾನಿ ಕಣ್ಣುಮಿಟುಕಿಸತೊಡಗಿದರು. ಪಕ್ಕದಲ್ಲಿದ್ದ ಚಿಕ್ಕ ವಯಸ್ಸಿನ ನಟಿ ಕೃತಿ ಶೆಟ್ಟಿಗೂ ಇರುಸುಮುರುಸಾಗತೊಡಗಿತು. ಟಿ.ವಿ. ಶೋ ಒಂದರಲ್ಲಿ 'ಶ್ಯಾಮ್ ಸಿಂಘ ರಾಯ್' ತೆಲುಗು ಚಿತ್ರದ ಪ್ರಚಾರಕ್ಕೆಂದು ಸಂದರ್ಶನ ನೀಡುತ್ತಿದ್ದ ಸಂದರ್ಭ ಅದು. ಸಂದರ್ಶಕಿ ಟ್ರೇಲರ್ ನೋಡಿದ ಮೇಲೆ ಇಬ್ಬರ ನಡುವಿನ ಪ್ರಣಯ ಸನ್ನಿವೇಶಗಳನ್ನು ಉಲ್ಲೇಖಿಸಿ, 'ಯಾವ ದೃಶ್ಯದಲ್ಲಿ ನಟಿಸುವುದು ಸುಲಭವಾಯಿತು' ಎಂದು ಪ್ರಶ್ನೆ ಹಾಕಿದರು. ನಡುವೆ ಮಾತು ತಡೆದದ್ದು ಪ್ರತಿಭಾವಂತ, ನಿರ್ಭಿಡೆಯ ನಟಿ ಸಾಯಿ ಪಲ್ಲವಿ.

ಸಾಯಿ ಪಲ್ಲವಿ ಆ ವಾಹಿನಿಯ ಕಾರ್ಯಕ್ರಮದಲ್ಲೇ ಹೇಳಿದ್ದಿಷ್ಟು: 'ನಟ–ನಟಿಯರ ವೃತ್ತಿಪರತೆಯ ಕ್ಷೇತ್ರ ಸಿನಿಮಾ. ಮುತ್ತು ಕೊಡುವುದು, ಸರಸವಾಡುವುದು ಇಂತಹ ಸನ್ನಿವೇಶಗಳಿಗೆ ಒಪ್ಪಿಕೊಂಡಿರುತ್ತೇವೆ. ಅವರವರ ಸುರಕ್ಷಾ ವಲಯಕ್ಕೆ ತಕ್ಕಂತೆಯೇ ನಟನೆಯ ಭಾಗವಾಗಿ ಅವನ್ನೆಲ್ಲ ಮಾಡಬೇಕಾಗಿರುತ್ತದಷ್ಟೆ. ಪಾತ್ರಗಳ ವರ್ತನೆ ಅದು. ನಟ–ನಟಿಯರು ಮನಃಪೂರ್ವಕವಾಗಿ ತಾವೇ ತಾವಾಗಿ ಹಾಗೆ ಮಾಡುವುದಿಲ್ಲ. ಆಗ ಅವರಿಗೆ ಕಿರಿಕಿರಿ ಆಗಿತ್ತೋ ಇಲ್ಲವೋ ಎನ್ನುವುದಕ್ಕಿಂತ ನಿಮ್ಮ ಈ ಪ್ರಶ್ನೆಯೇ ಕಷ್ಟ ಕೊಡುವಂತಿದೆ'.

ಸಾಯಿ ಪಲ್ಲವಿ ತಮ್ಮ ಈ ಪ್ರತಿರೋಧದ ಪ್ರತಿಕ್ರಿಯೆಯನ್ನು ಯಾವ ಉದ್ವೇಗವೂ ಇಲ್ಲದೆ ನಗುನಗುತ್ತಲೇ ನೀಡಿದರೆನ್ನುವುದು ವಿಶೇಷ. ■

